ಮಾಡಲಾಗಿದೆ. ಇವರ ಅನುಕೂಲಕ್ಕಾಗಿ 2001–2003ರ ವರೆಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ ಯಾವುದೇ ಸೌಲಭ್ಯ ಒದಗಿಸಿರುವುದಿಲ್ಲ. ಆದರೆ ನಿರ್ಮಲಜ್ಯೋತಿ ಯೋಜನೆಯಡಿ ಮೊದಲನೇ ಸಾಲಿನಲ್ಲಿ 9 ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು 196.32 ಲಕ್ಷ ರೂ. ಗಳಿಗೆ ಮಂಜೂರಾತಿ ನೀಡಿ ಕಾರ್ಯಾದ್ಯೇಶ ನೀಡಲಾಗಿದೆ.

ಶಿವಮೊಗ್ಗದ ಕುವೆಂಪು ರಂಗ ಮಂದಿರದ ದುರಸ್ತಿ ಕಾರ್ಯಕ್ಕೆ ಅನುದಾನ ನೀಡುವ ಬಗ್ಗೆ

2895(3271) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿರುವ ಕುವೆಂಪು ರಂಗಮಂದಿರದ ಸುಣ್ಣ ಬಣ್ಣ ಮಾಡಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆಯೇ; ವಿವರ ನೀಡುವುದು.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ) 2002–03ರಲ್ಲಿ ರೂ. 90,000–00ಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಯೋಜನೆ ಕುರಿತು

2896(3390) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೊದಲನೇ ಹಂತದಿಂದ ಇಲ್ಲಿಯವರೆಗೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ;

ಆ) ಇವುಗಳಲ್ಲಿ ಎಷ್ಟು ಗ್ರಾಮಗಳಿಗೆ ಈಗಾಗಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ;

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿ ಈ ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯದ ಸಲುವಾಗಿ ಖರ್ಚು ಮಾಡಿದ ವೆಚ್ಚವೆಷ್ಟು; ವಿವರ ಒದಗಿಸುವುದು;

ಈ) ವಿಶ್ವಬ್ಯಾಂಕ್ ಯೋಜನೆಯಡಿ ಗ್ರಾಮಗಳನ್ನು ಆಯ್ಕೆ ಮಾಡಿದ್ದಾಗ್ಯೂ ಕುಡಿಯುವ ನೀರಿನ ಸೌಲಭ್ಯ ಒದಗಿಸದೇ ಇರುವ ಗ್ರಾಮಗಳಿಗೆ ಸರ್ಕಾರವು ತೆಗೆದುಕೊಂಡಿರುವ ನಿಲುವೇನು;

ಉ) ಈ ಯೋಜನೆಯ ವಿಳಂಬಕ್ಕೆ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ವಿಶ್ವಬ್ಯಾಂಕ್ ನೆರವಿನ ಯೋಜನೆ–1ರ ಹಂತ–1 ಮತ್ತು ಹಂತ–2ರ ಸಲುವಾಗಿ ಪ್ರಾರಂಭದಲ್ಲಿ ಒಟ್ಟು 1200 ಗ್ರಾಮಗಳನ್ನು ಸಮುದಾಯದ ಸಂಗ್ರಹಣೆಗಾಗಿ ಆಯ್ಕೆ ಮಾಡಲಾಗಿತ್ತು. ಯೋಜನೆಯನ್ನು ಅನುಷ್ಠಾನಗೊಳಿಸಲು ವಿಶ್ವಬ್ಯಾಂಕ್‌ನವರು 950 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡುವಂತೆ ಸಲಹೆ ಮಾಡಿದ್ದರೂ, ಯೋಜನೆಯ ನಿಯಮಗಳನ್ನು ಒಪ್ಪಿ ಯೋಜನೆಯಲ್ಲಿ ಪಾಲ್ಗೊಳ್ಳಲು ಮುಂದೆ ಬಂದಂತಹ ಎಲ್ಲಾ 1104 ಗ್ರಾಮಗಳನ್ನು ಯೋಜನೆಯ ಅನುಷ್ಠಾನಕ್ಕೆ ತೆಗೆದುಕೊಳ್ಳಲಾಗಿರುತ್ತದೆ.

ವಿಶ್ವಬ್ಯಾಂಕ್ ನೆರವಿನ ಎರಡನೇ ಯೋಜನೆಯ ಅನುಷ್ಠಾನಕ್ಕೆ ಈವರೆಗೆ 1304 ಗ್ರಾಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಆ) ವಿಶ್ವಬ್ಯಾಂಕ್ ನೆರವಿನ ಎರಡನೇ ಯೋಜನೆಯನ್ನು 2002ನೇ ಫೆಬ್ರವರಿ ತಿಂಗಳಲ್ಲಿ ಜಾರಿಗೊಳಿಸಲಾಗಿದ್ದು, 1304 ಗ್ರಾಮಗಳಲ್ಲಿ ಯೋಜನಾ ಹಂತವು ಪ್ರಗತಿಯಲ್ಲಿರುತ್ತದೆ.